# 8

# ನಂಬಿಕೆಯ ಸ್ವರೂಪ

## (ಅಧ್ಯಾಯ 11)

ಇಬ್ರಿಯ ಪತ್ರಿಕೆಯನ್ನು ಯಾರಿಗೆ ಬರೆಯಲ್ಪಟ್ಟಿತ್ತೋ ಅವರು, ಆತ್ಮೀಕ ಜೀವಿತದ ಒಂದು ಸವಾಲನ್ನು ಎದುರಿಸಬೇಕಾಯಿತು: ಅವರು ದೇವರಿಂದ ಹಿಂಜರಿಯುವ ಸಾಧ್ಯತೆಯಿತ್ತು. ಒಂದು ವೇಳೆ ಅವರು ಜಾರಿ ಹೋದರೆ, ಅದರಿಂದ ಉಂಟಾಗುವ ಪರಿಣಾಮದ (10:26-31) ಬಗ್ಗೆ ಬರಹಗಾರನು 10 ಅಧ್ಯಾಯದಲ್ಲಿ ನೇರವಾದ ಸವಾಲನ್ನು ನೀಡಿರುವನು. ಮತ್ತು ಅವರು ನಿಶ್ಚಲರಾಗಿ ಇರಬೇಕೆಂದು ಪ್ರೋತ್ಸಾಹಿಸಿ ಹೇಳಿದನು. ಹಾಗೂ ತನ್ನ ಪತ್ರಿಕೆಯ ಒಂದು ಭಾಗದಲ್ಲಿ, "ನಾವಾದರೋ ಹಿಂತೆಗೆದವರಾಗಿ ನಾಶವಾಗುವವರಲ್ಲ, ನಂಬುವವರಾಗಿ ಪ್ರಾಣ ರಕ್ಷಣೆಯನ್ನು ಹೊಂದುವವರಾಗಿದ್ದೇವೆ" ಎಂದು ಮುಕ್ತಾಯ ಗೊಳಿಸಿದನು (10:39).

ಅವರು ಹಿಂಜರಿದು ಹೋಗದದಂತೆ ಏನು ಮಾಡಬೇಕಿತ್ತು, ನಿತ್ಯವಾದ ರಕ್ಷಣೆಗೆ ಏನು ಮಾಡಬೇಕಿತ್ತು? ನಂಬಿಕೆ! ನಂಬಿಕೆಯ ಮೂಲಕ ಭ್ರಷ್ಟತೆಯನ್ನು ತಡೆಗಟ್ಟಬಹುದಿತ್ತು!

ಕ್ರೈಸ್ತರ ನಿತ್ಯರಕ್ಷಣೆಗೆ, ನಂಬಿಕೆಯೇ ಪ್ರಮುಖವಾಗಿರುವುದೆಂದು ಹೇಳಿ ಆ "ನಂಬಿಕೆ" ಎಂದರೇನು ಮತ್ತು ಅದರ ಅರ್ಥವೇನೆಂದು ಬರಹಗಾರನು ತಿಳಿಸಿರುವನು. ಅದಕ್ಕಾಗಿಯೇ ನಂಬಿಕೆಯ ಸ್ವರೂಪದ ಕುರಿತು ಪ್ರಸಂಗವನ್ನು ಮಾಡಿರುವನು. ಆ ಪ್ರಸಂಗದಲ್ಲಿ ಪರಿಶುದ್ಧಾತ್ಮನು ತಿಳಿಸಿರುವ, ನಂಬಿಕೆಯ ಸ್ವರೂಪವನ್ನು ತಿಳಿಯೋಣ.

### ದೈಹೀಕ ಪ್ರಜ್ಞೆಗೆ ಬಾರದ್ದನ್ನು ನಂಬಿಕೆಯು ಒಪ್ಪಿಕೊಳ್ಳುತ್ತದೆ

ಮೊದಲನೆಯದಾಗಿ, ದೈಹೀಕ ಪ್ರಜ್ಞೆಗೆ ಅರಿವಾಗದೆ ಇರುವದನ್ನು ಅಂಗೀ ಕರಿಸಿಕೊಳ್ಳುತ್ತದೆ. ಇಬ್ರಿಯ 11:1, 2 ರಲ್ಲಿ ಅಧ್ಯಾಯದ ಮುಖ್ಯ ಪ್ರಸ್ತಾಪವನ್ನು ಮಾಡಲಾಗಿದೆ: "ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣುವದನ್ನು ನಿಜವೆಂದು ತಿಳುಕೊಳ್ಳುವದೂ ಆಗಿದೆ. ನಮ್ಮ ಪೂರ್ವಿಕರು ನಂಬಿಕೆಯುಳ್ಳವ ರಾಗಿದ್ದದರಿಂದಲೇ ಒಳ್ಳೇ ಹೆಸರನ್ನು ಹೊಂದಿದರು."

"ನಂಬಿಕೆಯ" ಅರ್ಥವನ್ನು ತಿಳಿಸುವ ಸಲುವಾಗಿ, ಕೆಲವು ಬಾರಿ ಇಬ್ರಿಯ 11:1ನ್ನು ಬಳಸಲಾಗುತ್ತದೆ. ಆದರೆ ತಾಂತ್ರೀಕವಾಗಿ ಆ ಪದವನ್ನು ಅದೇ ಪದದಿಂದ ವಿವರಿಸಲು ಆಗುವದಿಲ್ಲ. "ನಂಬಿಕೆ ಎಂಬುದು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದು" ಎಂದಿದ್ದರು, ಬರಹಗಾರನು "ನಂಬಿಕೆಯ" ಅರ್ಥವನ್ನು ತಿಳಿಸಿರುವದಿಲ್ಲ. "ದೇವರು ಪ್ರೀತಿ ಸ್ವರೂಪನು" ಎಂಬುದಕ್ಕೆ "ದೇವರು" ಎಂಬ ಪದವನ್ನು ಬಳಸಿದ್ದರೂ, ಅಂದರೆ ಪ್ರೀತಿಯು ವ್ಯಕ್ತಿತ್ವದ ಸ್ವರೂಪವಾಗಿದೆ; ಆದರೆ ದೇವರು ಅಷ್ಟು ಮಾತ್ರಕ್ಕೆ ಸೀಮಿತವಾಗುವದಿಲ್ಲ. ಹಾಗೆಯೇ ನಿರೀಕ್ಷಿಸುವವುಗಳ ಮೇಲೆ ಭರವಸದಿಂದಿರುವದು ಮಾತ್ರ "ನಂಬಿಕೆ" ಎಂಬ ಪದದ ಅರ್ಥವಾಗಿರುವದಿಲ್ಲ.

ಹೇಗೂ, ಇಬ್ರಿಯ 11:1ರ ವಿವರಣೆಯು, ಅಧ್ಯಾಯದ ಪ್ರಮುಖ ಅಂಶವಾಗಿದೆ. ಒಬ್ಬನು, ನಂಬಿಕೆಯ ವಿಚಾರಗಳನ್ನು ಧೈಹೀಕವಾಗಿ ವಿವರಿಸಲು ಅಸಾಧ್ಯವಾದರೂ ಅದು ಆತ್ಮೀಕವಾದ ಚಟುವಟಿಕೆಗಳು ವಾಸ್ತವ ಎಂದು ತಿಳಿಯುವದೇ ಆಗಿದೆ, ಮತ್ತು ಅದನ್ನು ಸಿದ್ಧಾಂತಗೊಳಿಸಲಾಗಿದೆ.

ನಿಜವಾದ ಜೀವಿತದಲ್ಲಿ ಇದು ಯಾವ ಅರ್ಥವನ್ನು ನೀಡುತ್ತದೆ? ನಾನು ಇದನ್ನು

ತಿಳಿಸುವೆನು ಎಂದು ಬರಹಗಾರನು ತಿಳಿಸಿರುವನು. "ನಂಬಿಕೆಯಲ್ಲಿದ್ದ ಪೂರ್ವಜರ ನಿದರ್ಶನವನ್ನು ತಿಳಿಸಲಾಗಿದೆ. ನಂತರದಲ್ಲಿ ನಂಬಿಕೆಯಿಂದ ದೇವರ ಅಂಗೀಕರವನ್ನು ಹೊಂದಿದವರ ಬಗ್ಗೆ ತಿಳಿಸಲಾಗಿದೆ." ಆತನು ಬೈಬಲಿನೊಳಗೆ (ಹಳೆ ಒಡಂಬಡಿಕೆ) ಇಣಿಕಿ ನೋಡುವಂತೆ ಮಾಡಿ ತಮ್ಮ ದೃಷ್ಟಿಯನ್ನು ನಂಬಿಕೆಯ ನಾಯಕರುಗಳ ಮೇಲೆ ಲಕ್ಷ್ಯವಿಡುವಂತೆ ಸೆಳೆದರು.

ವಚನ 3ರಲ್ಲಿ ನಂಬಿಕೆಯ ಕುರಿತಾದ ಮೊದಲ ನಿದರ್ಶನವನ್ನು ನೀಡಲಾಗಿದೆ: "ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ." ಜಗತ್ತಿನ ಸೃಷ್ಟಿ ಹೇಗೆ ಉಂಟಾಯಿತು? ಏಕೆಂದರೆ ಆ ಸಮಯದಲ್ಲಿ ನಾವುಗಳು ಇರಲಿಲ್ಲ, ಸೃಷ್ಟಿಯ ಕ್ರಿಯೆಯನ್ನು ನಾವುಗಳು ನೋಡಲಿಲ್ಲ, ಆದಾಗ್ಯೂ ದೇವರೇ ಅದನ್ನು ಮಾಡಿರುವನೆಂಬ ನಂಬಿಕೆ ನಮಗುಂಟು. ಅದನ್ನು ನಾವು ದೈಹಿಕವಾಗಿ ಪರಿಗ್ರಹಿಸಲು ಸಾಧ್ಯವಿಲ್ಲ, ಆದರೆ ದೇವರು ಸೃಷ್ಟಿಸಿದನು ಎಂಬದನ್ನು ನಂಬಿಕೆಯಿಂದಲೇ ತಿಳಿಯುತ್ತೇವೆ. ಹಾಗೂ ಆ ಸ್ವರೂಪದ ನಂಬಿಕೆಯ ಕುರಿತು ನಿದರ್ಶನಗಳ ಒಂದು ದೊಡ್ಡ ಪಟ್ಟಿಯನ್ನು ನೀಡಲಾಗಿದೆ.

## ನಂಬಿಕೆಯಿಂದ ದೇವರನ್ನು ಮೆಚ್ಚಿಸಲು ಸಾಧ್ಯ

ನಂಬಿಕೆಯ ಸ್ವರೂಪದ ಕುರಿತು: ದೇವರನ್ನು ಮೆಚ್ಚಿಸುವದು ಎರಡನೆಯ ಸಂಗತಿಯಾಗಿದೆ (ಇಬ್ರಿಯ 11:4-7). ಇಲ್ಲಿ ಬರಹಗಾರನು ಹೇಬೇಲನ ಕುರಿತು ತಿಳಿಸುತ್ತಿದ್ದಾನೆ (ಆದಿಕಾಂಡ 4). ನಂತರ ಹನೋಕ (ಆದಿಕಾಂಡ 5) ಹಾಗೂ ನೋಹನ ಕುರಿತು ತಿಳಿಸಿದ್ದಾನೆ (ಆದಿಕಾಂಡ 6). ಇವರೆಲ್ಲರೂ ದೇವರನ್ನು ಮೆಚ್ಚಿಸಿದವರೇ, ಅಂದರೆ ಅವರಲ್ಲಿ ನಂಬಿಕೆಯಿತ್ತು ಎಂಬ ಸತ್ಯಾಂಶವಾಗಿದೆ. "ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ ದೇವರ ಬಳಿಗೆ ಬರುವವನು ದೇವರು ಇದ್ದಾನೆ ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ" (11:6). ಹೌದು ಈ ವಾಕ್ಯವು ಅತಿ ಅವಶ್ಯವಾದದ್ದು! ನಂಬಿಕೆಯ ಎರಡು ಸಂಗತಿಗಳನ್ನು ಹೊರತುಪಡಿಸಿ, ನಾವುಗಳು ದೇವರನ್ನು ಮೆಚ್ಚಿಸುವದು ಅಸಾಧ್ಯ: ದೇವರು ಇದ್ದಾನೆ ಮತ್ತು ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದೇ! ಕ್ರೈಸ್ತರಾಗಲೂ ಹಾಗೂ ಕ್ರೈಸ್ತರಾಗಿ ಜೀವಿಸಲು ನಂಬಿಕೆ ಅತಿಅವಶ್ಯ.

## ನಂಬಿಕೆ ವಿಧೇಯತೆ

ನಂಬಿಕೆಯು ವಿಧೇಯತೆಗೆ ನಡೆಸುತ್ತದೆ ಎಂಬದು ಮೂರನೆಯ ಸತ್ಯಾಂಶ ವಾಗಿದೆ (ಇಬ್ರಿಯ 11:8-12). ಅಬ್ರಹಾಮನನ್ನು "ನಂಬಿಕೆಯ ತಂದೆಯೆಂದು" ಕರೆಯಲಾಗಿದೆ? ಏಕೆಂದರೆ ಅವನು ವಿಧೇಯನಾದನು (11:8)! 11:17-19ರಲ್ಲಿ ವಿಧೇಯತೆಯ ಕುರಿತು ಅಬ್ರಹಾಮನ ಪ್ರಮುಖ ನಿದರ್ಶನವನ್ನು ನೀಡಲಾಗಿದೆ, ದೇವರ ಅಪ್ಪಣೆಯ ಮೇರೆಗೆ ತನ್ನ ಮಗನಾದ ಇಸಾಕನನ್ನು ಒಪ್ಪಿಸಲು ಅಬ್ರಹಾಮನು ಮುಂದಾದನು. ಶ್ರೇಷ್ಟ ನಂಬಿಕೆ ಎಂದರೇನು? ಈ ಅಧ್ಯಾಯದಲ್ಲಿ ಆ ನಂಬಿಕೆಯ ಕುರಿತಾಗಿಯೇ ಮುಂದುವರೆಸಲಾಗಿದೆ, ಅದು ಕ್ರಿಯೆಯಲ್ಲಿರುವ ನಂಬಿಕೆಯಾಗಿದೆ! ಅದು ವಿಧೇಯತೆಯಾಗಿರುವದರಿಂದ:

> ಹೇಬೇಲನು ನಂಬಿಕೆಯ ಮೂಲಕವೇ ಶ್ರೇಷ್ಟವಾದ ಯಜ್ಞವನ್ನು ಅರ್ಪಿಸಿದನು ... (ವಚನ 4).
> ನಂಬಿಕೆಯಿಂದಲೇ ನೋಹನು ನಾವೆಯನ್ನು ಕಟ್ಟಿದನು ... (ವಚನ 7).
> ನಂಬಿಕೆಯಿಂದಲೇ ಅಬ್ರಹಾಮನು ಅವಿಧೇಯನಾದನು ... (ವಚನ 8).
> ನಂಬಿಕೆಯಿಂದಲೇ ಅಬ್ರಹಾಮನು ಯಜ್ಞವನ್ನರ್ಪಿಸಿದನು ... (ವಚನ 17).
> ನಂಬಿಕೆಯಿಂದಲೇ ಇಸಾಕನನ್ನು ಆಶೀರ್ವದಿಸಿದನು ... (ವಚನ 20).
> ನಂಬಿಕೆಯಿಂದಲೇ ಯಾಕೋಬನನ್ನು ಆಶೀರ್ವದಿಸಿದನು ... (ವಚನ 21).
> ನಂಬಿಕೆಯಿಂದಲೇ ಮೋಶೆಯ ತಂದೆತಾಯಿಗಳು ಅವನನ್ನು ಅಡಗಿಸಿಟ್ಟರು ... (ವಚನ 23).

ನಂಬಿಕೆಯಿಂದಲೇ ಮೋಶೆಯು ನಿರಾಕರಿಸಿದನು ... (ವಚನ 24).
ನಂಬಿಕೆಯಿಂದಲೇ ಮೋಶೆಯು ಪಸ್ಕವನ್ನು ಆಚರಿಸಿದನು ... (ವಚನ 28).
ನಂಬಿಕೆಯಿಂದಲೇ ಜನರು ಕೆಂಪು ಸಮುದ್ರವನ್ನು ದಾಟಿದರು ... (ವಚನ 29).
ನಂಬಿಕೆಯಿಂದಲೇ ಯೆರಿಕೋ ಗೋಡೆಯು ಬಿದ್ದು ಹೋಯಿತು ... (ವಚನ 30).
ನಂಬಿಕೆಯಿಂದಲೇ ರಾಹಾಬಳು ಗೂಢಾಚಾರರನ್ನು ಸೇರಿಸಿಕೊಂಡಳು ... (ವಚನ 31).

ನಿಮ್ಮಲ್ಲಿ ನಂಬಿಕೆ ಇದೆಯೇ? ಅದು ನಿನ್ನ ಆಲೋಚನೆಯಲ್ಲಾಗಲೀ, ಭಾವನೆ ಯಲ್ಲಾಗಲೀ, ಅಥವಾ ನಿನ್ನ ಗ್ರಹಣ ಶಕ್ತಿಯಲ್ಲಾಗಲೀ ಇರದೆ, ನಾನು ಮಾಡುವಂಥ ಕಾರ್ಯದಲ್ಲಿ ಒಳಗೊಂಡಿರುತ್ತದೆ! ವಿಧೇಯತೆಯಲ್ಲಿ, ನಿನ್ನ ನಂಬಿಕೆಯನ್ನು ಪ್ರಕಟಪಡಿಸುತ್ತಿ, ನಂತರ ನಿನ್ನಲ್ಲಿ ಯಥಾರ್ಥವಾದ ನಂಬಿಕೆ ಇರಲು ಸಾಧ್ಯ.

## ಅಂತಿಮವಾಗಿ ದೊರಕುವ ಬಹುಮಾನದ ಕಡೆಗೆ ನಂಬಿಕೆಯು ನೋಡುತ್ತದೆ

ನಾಲ್ಕನೆಯದಾಗಿ, ನಂಬಿಕೆಯು, ಕಾಣದೆ ಇರುವ ಸಂಗತಿಯ ಮೇಲೆ ದೃಷ್ಟಿ ಇಟ್ಟಿರುತ್ತದೆ. 11:13-22ರಲ್ಲಿರುವ "ನಂಬಿಕೆಯ" ನಾಯಕರುಗಳು, ತಮ್ಮ ಜೀವಮಾನ ಕಾಲದಲ್ಲೇ, ತಾವು ಭಯಸಿದ್ದನ್ನು ಅನುಭವಿಸಲಿಲ್ಲ. ಅಬ್ರಹಾಮನು ತಾನು ವಾಗ್ದಾನವಾಗಿ ಪಡೆದ ದೇಶವನ್ನು ತನ್ನ ಜೀವಾಂತ್ಯ ಕಾಲದಲ್ಲಿ ನೋಡಲೇ ಇಲ್ಲ. ಇಸಾಕನು, ತನ್ನ ಮಗನಾದ ಯಾಕೋಬ ನನ್ನು ಆಶೀರ್ವದಿಸಿದನು, ಅದನ್ನು ತನ್ನ ಜೀವಮಾನ ಕಾಲದಲ್ಲಿ ನೋಡಲಿಲ್ಲ. ಯಾಕೋಬನು ಆಶೆಯಿಂದ ತನ್ನ ಮಕ್ಕಳನ್ನು ಆಶೀರ್ವದಿಸಿದರೂ, ಅವುಗಳ ನೆರವೇರಿಕೆಯನ್ನು ನೋಡಲಿಲ್ಲ. ಕಾನಾನ್ ದೇಶದಲ್ಲೇ ತನ್ನ ಸಮಾಧಿಯಾಗ ಬೇಕು ಎಂದು ಯೋಸೇಫನು ಬಯಸಿ, ಒಂದು ದಿನ ಇಸ್ರಾಯೇಲ್ಯರು ಐಗುಪ್ತದಿಂದ ಹೊರ ಹೋಗುವರು ಎಂದು ತಿಳಿದರೂ, ಅವನ ಬಯಕೆ ಈಡೇರುವ ಮೊದಲೇ ಮರಣ ಹೊಂದಿದನು.

ನಂಬಿಕೆ ಅಂದರೇನು? ವರ್ತಮಾನವನ್ನು ದಾಟಿ, ಭವಿಷ್ಯತ್ತಿನಲ್ಲಿ ನೆರವೇರಬೇಕಾದ ಸಂಗತಿಯ ಮೇಲೆ ನಿರೀಕ್ಷೆ ಇಡುವದೇ ಆಗಿದೆ. ನಾವು ಸಹ ಪೂರ್ವಿಕರಂತೆ ಇರಬೇಕು ಎಂದು ಬಯಸಿರಬಹುದು (ವಚನಗಳು 13-16), ಹಾಗಿದ್ದರೆ, ಅವರಿಗುಂಟಾದ ಆಶೀರ್ವಾದಗಳನ್ನೇ ನಾವುಗಳು ಹೊಂದಲು ಸಾಧ್ಯವಿದೆ. (ಅವರು ವಾಗ್ದಾನಗಳನ್ನು ಹೊಂದಿದ್ದರು ವಚನ 17, ನೋಡಿರಿ ವಚನ 33.)

## ನಂಬಿಕೆಯಿಂದ ವಿವೇಕದ ನಿರ್ಧಾರಗಳನ್ನು ಮಾಡಬಹುದು

ಐದನೆಯದಾಗಿ, ನಾವು ಮಾಡುವ ಮಹತ್ವದ ನಿರ್ಧಾರಗಳಲ್ಲಿ, ನಂಬಿಕೆಯು ಸಹಾಯವಾ ಗುತ್ತದೆ (ಇಬ್ರಿಯ 11:23-28). ಮೋಶೆಯ ತಂದೆ ತಾಯಿಗಳು ಮೋಶೆಯನ್ನು ಕೊಲ್ಲಬೇಕೋ ಅಥವಾ ಕೊಲ್ಲಬಾರದೋ ಎಂಬ ನಿರ್ಧಾರವನ್ನು ಮಾಡಬೇಕಿತ್ತು. ಮೋಶೆಯು ತಾನು ಫರೋಹನ ಪರಿವಾರದವರ ಒಂದು ಭಾಗವಾಗಬೇಕಿತ್ತೋ ಅಥವಾ ದಾಸರಾದ ಇಸ್ರಾಯೇಲ್ಯರ ಸಂಗಡ ಇರಬೇಕೋ ಎಂಬ ನಿರ್ಧಾರವನ್ನು ಮಾಡಬೇಕಾಯಿತು. ದೇವರು ಹತ್ತನೆಯ ಪಿಡುಗನ್ನು ಎದರಿಸುವಂತೆ ಮತ್ತು ದೇವರಿಗೆ ವಿಧೇಯರಾಗುವಂತೆ ರಕ್ತವನ್ನು ಬಾಗಿಲಿನ ನಿಲುವು ಪಟ್ಟಿಗಳಿಗೆ ಚಿಮುಕಿಸುವ ನಿರ್ಧಾರವನ್ನು ಇಸ್ರಾಯೇಲ್ಯರು ಮಾಡಬೇಕಿತ್ತು. ದೇವರ ಅಪ್ಪಣೆಯ ಮೇರೆಗೆ ಕೆಂಪು ಸಮುದ್ರವನ್ನು ದಾಟುವಂತ ನಿರ್ಧಾರ ಮಾಡಬೇಕಿತ್ತು. ಇವುಗಳು ಕಷ್ಟಕರವಾದ ನಿರ್ಧಾರಗಳಾಗಿವೆ! ಹೇಗೂ ಜನರು ಉತ್ತಮವಾದ ನಿರ್ಧಾರವನ್ನೇ ಮಾಡಿದ್ದರು! ಯಾವ ಒತ್ತಾಯದಿಂದ ಅದನ್ನು ಅವರು ಮಾಡಿದರು? ಪ್ರತಿಫಲ ಯುವಂಥ ನಂಬಿಕೆಯೇ! ಉದಾಹರಣೆ, "ಮೋಶೆಯು ಸ್ವಲ್ಪಕಾಲ ಪಾಪ ಬೋಗಗಳನ್ನು ಅನುಭವಿಸುವದಕ್ಕಿಂತ ದೇವರ ಜನರೊಂದಿಗೆ ಕಷ್ಟವನ್ನು ಅನುಭವಿಸುವದೇ ಒಳ್ಳೆದೆಂದು ತೀರ್ಮಾನಿಸಿಕೊಂಡನು" (11:25, 26).

ಈ ದಿನಗಳಲ್ಲಿ ನಾವುಗಳು ಕಷ್ಟಕರವಾದ ನಿರ್ಧಾರಗಳನ್ನು ಮಾಡುವಾಗ, ಅದೇ ವಿಧ ವಾದ ನಂಬಿಕೆಯನ್ನು (ನಾವುಗಳು) ಹೊಂದಿರಬೇಕು! "ನಾನು ಸೇವಕನಾಗಿ ಸೇವೆ ಸಲ್ಲಿಸಬಲ್ಲನೇ"; "ಶುದ್ಧರಾಗಿ, ನೈತಿಕ ಜೀವನವನ್ನು ಜೀವಿಸಲು ಸಾಧ್ಯವೇ?"; "ಸುಖ ಭೋಗ ಗಳನ್ನು ಆರಾಧಿಸಿ, ಹಣದ ಶೋಧನೆಯ ನಿರಾಕರಿಸಬಹುದೇ?" ಸರಿಯಾದ ನಿರ್ಧಾರವನ್ನು ಕೈಗೊಳ್ಳಲು ನಮಗೆ, ನಂಬಿಕೆಯ ಅಗತ್ಯವಿದೆ-ಬಹುಮಾನಕ್ಕಾಗಿ ಕಾದು ನೋಡುವ ವಿಶ್ವಾಸ!

## ನಂಬಿಕೆಯಿಂದ ಜಯ ಉಂಟಾಗುತ್ತದೆ

ಆರನೆಯದಾಗಿ, ನಂಬಿಕೆಯ ಸ್ವರೂಪದ ಕುರಿತು, ನಾವು ದೇವರನ್ನು ಅವಲಂಭಿಸಿಕೊಂಡರೆ, ಸಕಲ ಅಡೆತಡೆಗಳ ಮೇಲೆ ಜಯವನ್ನು ಹೊಂದುತ್ತೇವೆ. 11:29-31ರಲ್ಲಿರುವ ಮೂರು ನಿದರ್ಶನಗಳು ಗಮನಾರ್ಹವಾಗಿವೆ. ಅಂತಹ ಸಕಲ ಅಡೆತಡೆಗಳನ್ನು ಇಸ್ರಾಯೇಲ್ಯರು ದಾಟಿ ಹೋಗಿದ್ದರು. ಯೆರಿಕೋ ಪಟ್ಟಣವನ್ನು (ಮಾನವ ಯೋಜನೆಯ ಪ್ರಕಾರ) ಸ್ವಾಧೀನಪಡಿಸಿ ಕೊಳ್ಳುವದು ಅಸಾಧ್ಯವೆನ್ನಿಸಿದರೂ, ಆ ಯೆರಿಕೋ ಗೋಡೆಗಳನ್ನು ಕೆಡವಿಹಾಕಿದರು. ಒಬ್ಬಂಟಿಗಳಾದ ರಾಹಾಬಳ ಪ್ರಯತ್ನದಿಂದ ಸಕಲ ಇಸ್ರಾಯೇಲ್ಯರಿಗೆ ಜಯವು ಲಭಿಸಿತು. ಏನೇ ಅಡೆತಡೆಗಳಿದ್ದರೂ, ನಂಬಿಕೆಯ ಮೂಲಕ ಜಯ ಸಾಧಿಸಬಹುದು.

ಹೇಗಿದ್ದರೂ, ನಮ್ಮ ಸ್ವಂತ ಬಲದಿಂದ ಜಯಸಾಧಿಸಲು ಅಸಾಧ್ಯ. ಅದು ದೇವರ ಶಕ್ತಿಯಿಂದ ಲಭಿಸುತ್ತದೆ! ನಾವು ನಂಬಿಕೆಯಲ್ಲಿ ನಂಬಿಕೆ ಇಡದೆ, ದೇವರಲ್ಲಿ ಮಾತ್ರ ನಂಬಿಕೆ ಇಡಬೇಕಷ್ಟೆ! ಇಸ್ರಾಯೇಲ್ಯರು ಪಡೆದ ಜಯವನ್ನು ಅವರ ಸ್ವಂತ ಶಕ್ತಿಯಿಂದ ಪಡೆಯದೆ, ದೇವರ ಬಲದಿಂದಲೇ ಪಡೆದರು ಎಂಬ ಸತ್ಯಾಂಶವನ್ನು ಅವರು ತಿಳಿದಿದ್ದರು!

ಮುಂದಿನ ವಚನಗಳಲ್ಲೂ ಸಹ ಜಯದ ಕುರಿತ ಅಂಶಗಳಿವೆ (ಇಬ್ರಿಯ 11:32-35ಎ). ಇಸ್ರಾಯೇಲ್ಯರು ತಮ್ಮ ರಕ್ಷಣೆಗಾಗಿ ದೇವರನ್ನೇ ಅವಲಂಭಿಸಿದರು ಎಂಬ ಸಂಗತಿಗಳಿವೆ.

11:35ಬಿ-38ರಲ್ಲಿ, ವಿಭಿನ್ನತೆಯಲ್ಲಿ ಕಾಣುತ್ತೇವೆ, ಭೌತಿಕವಾದ ಯಾವುದೇ ಜಯವೆಂದು ಹೇಗೆ ಕರೆಯೋಣ? ಅವರಿಗೆ ಈ ಜೀವಿತದಲ್ಲಿ ಯಾವುದೇ ಜಯ ದೊರೆಯಲಿಲ್ಲ! ಆದರೆ, ಅವರು ಮುಂದಿನ ಜೀವಿತಕ್ಕಾಗಿ ಜಯವನ್ನು ಪಡೆದಿದ್ದರು.

> ಇವರೆಲ್ಲರೂ ನಂಬಿಕೆಯ ಮೂಲಕ ಒಳ್ಳೇ ಹೆಸರನ್ನು ಸಂಪಾದಿಸಿಕೊಂಡಿದ್ದರೂ ವಾಗ್ದಾನದ ಫಲವನ್ನು ಹೊಂದಲಿಲ್ಲ; ದೇವರು ನಮಗೋಸ್ಕರ ಶ್ರೇಷ್ಠ ವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು (11:39, 40).

ಆದ್ದರಿಂದ, ದೇವರ ಶಕ್ತಿಯಿಂದ ದೊರೆಯುವ ಜಯವು ಈ ಲೋಕಕ್ಕೆ ಮಾತ್ರ ಸೀಮಿತವಾಗಿರುವದಿಲ್ಲ - ಆದಾಗ್ಯೂ ಅದು ಜಯವೆಂಬ ಅರ್ಥವಾಗಿದೆ! ನಮ್ಮ ಅಂತಿಮವಾದ ಜಯವು ಪರಲೋಕದಲ್ಲಿದೆ!

## ಮುಕ್ತಾಯ

ಈ ಯುಗಕ್ಕೆ ಅನುಗುಣವಾದ ಪ್ರಮುಖ ಅಂಶವನ್ನು ಇಬ್ರಿಯ 11:39, 40 ರಲ್ಲಿ ತಿಳಿಸಲಾಗಿದೆ. ಧರ್ಮಶಾಸ್ತ್ರದ ನೆರವೇರಿಕೆಯಂತೆ, ಕ್ರಿಸ್ತನ ಆಗಮನವಿಲ್ಲದೆ, ನಂಬಿಕೆಯ ನಾಯಕರುಗಳು ಪರಿಪೂರ್ಣರಾಗುವದು ಅಸಾಧ್ಯ. ನಾವುಗಳು ಸಹ ಈ ಜನರ ಪಂಕ್ತಿಗೆ ಸೇರಿದವರು ಎಂಬ ಸತ್ಯಾಂಶವನ್ನು ಇಲ್ಲಿ ವಿವರಿಸಲಾಗಿದೆ!

ಮೋಶೆಯು ಮಾಡಿದ ನಿರ್ಧಾರದ ನಿಮಿತ್ತ ಹಾಗೂ ನೀವುಗಳು ಮಾಡಿದ ನಿರ್ಧಾರ

ಪರಲೋಕ ಪ್ರವೇಶಮಾಡಲು ಸಾಧ್ಯವಿದೆ. ವಿಧೇಯತೆಯ ನಿಮಿತ್ತ ಅಬ್ರಹಾಮನು ಅಲ್ಲಿರುವಂತೆ, ನೀವುಗಳು ಸಹ ನಿಮ್ಮ ವಿಧೇಯತೆಯ ನಿಮಿತ್ತ ಅಲ್ಲಿರಲು ಸಾಧ್ಯವಿದೆ, ದೇವರ ಮಾರ್ಗದರ್ಶನದಂತೆ ನಡೆದ ಪೂರ್ವಿಕರು ಅಲ್ಲಿರುವರು. ಈ ಕಾರಣದಿಂದಲೇ ಅನೇಕ ಮಿಷನರಿಗಳು ಅವರೊಟ್ಟಿಗೆ ಇರುವರು ಎಂಬುದು ನನ್ನ ನಂಬಿಕೆಯಾಗಿದೆ. ತಾನು ನೋಡದೆ ಇದ್ದರೂ, ದೇವರ ಮಾತಿಗೆ ವಿಧೇಯನಾದ ನೋಹನು ಅಲ್ಲಿರುವನು. ಒಂದು ವೇಳೆ ಈ ಕಾರಣದಿಂದಲೇ ನೀವುಗಳು ಸಹ ಅಲ್ಲಿ ಸೇರಲು ಸಾಧ್ಯವಿದೆ!

ದೇವರ ಮುಂದೆ ಮಾನಸಾಂತರ ಪಟ್ಟು, ದೀಕ್ಷಾಸ್ನಾನ ಮಾಡಿಸಿಕೊಳ್ಳುವಂಥ ನಂಬಿಕೆ ನಿಮಗಿಲ್ಲದಿದ್ದರೆ, ಆ ನಂಬಿಗಸ್ತರ ಪಂಕ್ತಿಯೊಳಗೆ ಸೇರುವದು ಅಸಾಧ್ಯ. ಇನ್ನೂ ಆತನಿಗೆ ಅವಿಧೇಯರಾಗಿದ್ದರೆ, ನಂಬಿ ವಿಧೇಯರಾಗಿರಿ!